# ಬಳ್ಕೂರು ಗ್ರಾಮ ಪಂಚಾಯತ್

ವಿಳಾಸ: ಗ್ರಾಮ ಪಂಚಾಯತ್ ಕಛೇರಿ
ಬಳ್ಕೂರು, ಕುಂದಾಪುರ ತಾಲೂಕು
ಅಂಚೆ: ಬಳ್ಕೂರು 576 211

ದೂರವಾಣಿ ಸಂಖ್ಯೆ: 08254–236856
ಇ–ಮೇಲ್: balkuru34@gmail.com

ಕ್ರಸಂ: ಬ.ಗ್ರಾ.ಪಂ.2020–21

ದಿನಾಂಕ:13/05/2020

ರಿಗೆ

ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ.

ಮಾನ್ಯರೇ

ವಿಷಯ:–ಗ್ರಾಮ ಪಂಚಾಯತ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಪಂ.ಚಾಯತ್ ಸದಸ್ಯರ ಅಧಿಕಾರ ಅವಧಿ ವಿಸ್ತರಿಸುವ ಬಗ್ಗೆ ಮನವಿ.

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಗ್ರಾ.ಮ ಪಂಚಾಯತ್‌ಗಳಲ್ಲಿ ಸದಸ್ಯರ ಅಧಿಕಾರಾವಧಿ 2020 ಮೇ ತಿಂಗಳಲ್ಲಿ ಅಂತ್ಯಗೊಳ್ಳಲಿದೆ. ಪ್ರಸ್ತುತ ದೇಶದಾದ್ಯಂತ ಕೋವಿಡ್–19 ಕೊರೊನಾ ವೈರಸ್‌ನ ಸಮಸ್ಯೆ ಇರುವುದರಿಂದ ಚುನಾವಣೆ ನಡೆಸಿ ಗ್ರಾ.ಪಂ. ಸದಸ್ಯರ ಆಯ್ಕೆ ಕಷ್ಟಸಾಧ್ಯವಾಗಿದೆ. ಗ್ರಾಮ ಮಟ್ಟದಲ್ಲಿ ಹೊರ ರಾಜ್ಯ ಹೊರ ದೇಶಗಳಿಂದ ಆಗಮಿಸುತ್ತಿರುವ ಗ್ರಾಮಸ್ಥರಿಗೆ ಕ್ವಾರಂಟೈನ್ ವ್ಯವಸ್ಥೆ ಮಾಡುವ ಕರ್ತವ್ಯದಲ್ಲಿ ಗ್ರಾ.ಮ ಪಂಚಾಯತ್ ಸದಸ್ಯರ ಪಾತ್ರ ಅತೀ ಪ್ರಾಮುಖ್ಯದ್ದಾಗಿರುತ್ತದೆ. ಈ ಉದ್ದೇಶದಿಂದ ಬಳ್ಕೂರು ಗ್ರಾಮ ಪಂಚಾಯತ್‌ನ ಸರ್ವ ಸದಸ್ಯರು,ಈಗ ಕರ್ತವ್ಯ ನಿರ್ವಹಿಸುತ್ತಿರುವ ಸದಸ್ಯರ ಅಧಿಕಾರವಧಿಯನ್ನು ಮುಂದಿನ ಚುನಾವಣೆಗೆ ವಿಸ್ತರಿಸುವ ಬಗ್ಗೆ ಸರ್ಕಾರದ ಗಮನಕ್ಕೆ ತರುವ ಬಗ್ಗೆ ವಿಶೇಷ ಸಭೆಯಲ್ಲಿ ನಿರ್ಣಯಿಸಿರುತ್ತಾರೆ. ವಿಶೇಷ ಸಭೆಯ ನಿರ್ಣಯ ಪ್ರತಿಯನ್ನು ಸದ್ರಿ ಮನವಿ ಪತ್ರದೊಂದಿಗೆ ಲಗ್ತೀಕರಿಸಿ ಈ ಮೂಲಕ ತಮ್ಮ ಅಮೂಲ್ಯ ಅವಗಹನೆಗೆ ಸಲ್ಲಿಸಿದೆ.

ಇತೀ ತಮ್ಮ ವಿಶ್ವಾಸಿ,

ಅಧ್ಯಕ್ಷರು
ಗ್ರಾಮ ಪಂಚಾಯತ್ ಬಳ್ಕೂರು

ನಿರ್ಣಯ ಪ್ರತಿ

ದಿನಾಂಕ ರಂದು ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ಬಳ್ಕೂರು ಗ್ರಾಮ ಪಂಚಾಯತ್ ನಲ್ಲಿ ನಡೆದ ವಿಶೇಷ ಸಾಮಾನ್ಯ ಸಭೆಯ ನಿರ್ಣಯ ಪ್ರತಿ.

ಹಾಜರಿ–08 ಗೈರು ಹಾಜರಿ–0

ನಿರ್ಣಯ ಸಂಖ್ಯೆ–1/2020–21 ಗ್ರಾಮ ಪಂಚಾಯತ್ ಸದಸ್ಯರ ಅಧಿಕಾರಾವಧಿ ಮುಂದಿನ ಗ್ರಾಮ ಪಂಚಾಯತ್ ಚುನಾವಣೆ ನಿಗದಿ ಆಗುವವರೆಗೆ ವಿಸ್ತರಿಸುವ ಬಗ್ಗೆ .

2020 ಮೇ ನಲ್ಲಿ ಗ್ರಾಪಂ ಸದಸ್ಯರ ಅಧಿಕಾರ ಅವಧಿ ಸಂಪೂರ್ಣಗೊಳ್ಳಲಿದ್ದು ಸರ್ಕಾರದ ನಿಯಮದಂತೆ ಗ್ರಾಮ ಪಂಚಾಯತ್ ಸದಸ್ಯರ 5 ವರ್ಷದ ಅಧಿಕಾರ ಸಂಪೂರ್ಣಗೊಂಡ ನಂತರ ಆಡಳಿತಾಧಿಕಾರಿ ನೇಮಕ ಮಾಡುವ ಅವಕಾಶವಿರುತ್ತದೆ. ದೇಶದಾದ್ಯಂತ ಹಾಗೂ ರಾಜ್ಯದಾದ್ಯಂತ ಕೋವಿಡ್–19 ಕೊರೊನ ವೈರಸ್ ವ್ಯಾಪಕವಾಗಿ ಹರಡುತ್ತಿದ್ದು ,ಲಾಕ್ ಡೌನ್ ಸಮಯದಲ್ಲಿ ಗ್ರಾಮಸ್ಥರ ಸಮಸ್ಯೆಗಳಿಗೆ ಗ್ರಾಮ ಪಂಚಾಯತ್ ಸದಸ್ಯರುಗಳಾದ ನಾವು ಉತ್ತಮ ಸ್ಪಂದನೆ ನೀಡುತ್ತ ಬಂದಿರುತ್ತೇವೆ. ಗ್ರಾಮ ಪಂಚಾಯತ್ ಚುನಾವಣೆ ನಡೆಸಲು ಅಸಾಧ್ಯವಾಗಿದ್ದು ಈ ಸಂದರ್ಭದಲ್ಲಿ ಸರ್ಕಾರಿ ನಿಯಮದಂತೆ ಆಡಳಿತಧಿಕಾರಿ ನೇಮಕಗೊಂಡರೆ ಗ್ರಾಮ ಪಂಚಾಯತ್ ಸದಸ್ಯರ ಅಧಿಕಾರ ಮುಕ್ತಾಯಗೊಳ್ಳುತ್ತದೆ. ಕೊರೊನ ವೈರಸ್ ಹತೋಟಿ ಬಾರದೇ ಕರ್ನಾಟಕದಲ್ಲಿ ದಿನದಿಂದ ದಿನಕ್ಕೆ ಪ್ರಕರಣ ಜಾಸ್ತಿ ಆಗುತ್ತಿದ್ದು ಹೊರ ರಾಜ್ಯಗಳಿಂದ ಆಗಮಿಸುತ್ತಿರುವ ಗ್ರಾಮಸ್ಥರಿಗೆ ಕ್ವಾರಂಟೈನ್ ವ್ಯವಸ್ಥೆ ಮಾಡುವುದು ಹಾಗೂ ಗ್ರಾಮೀಣ ಕಾರ್ಯಪಡೆ ನಿರ್ವಹಿಸಬೇಕಾದ ಹಲವಾರು ಕಾರ್ಯಗಳಿರುವುದರಿಂದ ಗ್ರಾ.ಮ ಪಂಚಾಯತ್ ಸದಸ್ಯರ ಅಧಿಕಾರ ಆವಧಿ ಮುಂದುವರಿಸಲು ಸರ್ಕಾರದ ಗಮನಕ್ಕೆ ತರುವುದಾಗಿ ಸರ್ವಾನುಮತದಿಂದ ನಿರ್ಣಯಿಸಿತು.

Akshay [signature]

ಅಧ್ಯಕ್ಷರು

ಗ್ರಾಮ ಪಂಚಾಯತ್ ಬಳ್ಕೂರು